ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಮೇಯರ್‌ರವರ ಪಕ್ಕದಲ್ಲಿ ಆಯುಕ್ತರು ಕುಳಿತಿರುತ್ತಾರೆ. ಆಗಲೇ ಇದರ ಬಗ್ಗೆ ತಿಳಿ ಹೇಳಬಹುದಾಗಿತ್ತಲ್ಲವೇ? ಅವಾಸ್ತವವಾಗಿ ಈ ಬಜೆಟನ್ನು ಮಾಡುತ್ತಿದ್ದೀರಿ, ರೂಲ್ಸ್ ಸರಿ ಇಲ್ಲ ಎಂದು. ನಾವು ಅವರನ್ನು ಆಯುಕ್ತರನ್ನು ನೇಮಕ ಮಾಡಿರುವುದು ಸರ್ಕಾರ ತಿಳಿ ಹೇಳುವುದಕ್ಕೇ ಮಾಡಿರುವುದು. ಇದನ್ನೆಲ್ಲಾ ತಿಳಿ ಹೇಳುವುದಕ್ಕೆ ತಾನೇ ಮಾಡಿರುವುದು. ಮತ್ತೆ ಹೇಳಬಹುದಾಗಿತ್ತಲ್ಲವೇ? ಇದು ತಪ್ಪಾಗಿದೆ, ಇದನ್ನು ನಾನು ಕಳುಹಿಸುವುದಕ್ಕೆ ಸಾಧ್ಯ ಇಲ್ಲ ಎನ್ನುವ ಮಾತನ್ನು ಆಯುಕ್ತರು ಹೇಳಬಹುದಾಗಿತ್ತು. ಏಕೆ ಹೇಳಲಿಲ್ಲ? ಅಲ್ಲಿ ಬಜೆಟನ್ನು ಮಂಡನೆ ಮಾಡುವುದಕ್ಕೆ ಏಕೆ ಬಿಟ್ಟರು?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಾವು ಅನುಭವಸ್ಥರಿದ್ದೀರಿ. ಈಗ ಯಾರೂ ಕೂಡ ಅನೇಕ ಸಂದರ್ಭಗಳಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹಣ ಬೇಕು ಎನ್ನುವ ಸಂದರ್ಭಗಳಲ್ಲಿ ತಿಳಿ ಹೇಳಿಸಿಕೊಳ್ಳುವ ರೀತಿಯಲ್ಲಿ ಇರುವುದಿಲ್ಲ. ತಾವು ತಿಳಿ ಹೇಳಿಲ್ಲ ಎಂದು ಏತಕ್ಕೆ ಭಾವಿಸಿಕೊಳ್ಳುತ್ತೀರಿ? ಅದನ್ನು ಹೇಳುತ್ತಾರೆ. ಈಗ ನಮಗೆ ಹೇಳಿದರು, ಇವರನ್ನು ಕರೆದುಕೊಂಡು ಹೋಗಿ ಎಲ್ಲಿ ಕಡಿತ ಮಾಡಬೇಕು ಎಂದರೆ ನನ್ನ ಕ್ಷೇತ್ರದಲ್ಲಿ ಏತಕ್ಕೆ ಕಡಿತ ಮಾಡುತ್ತೀರಿ ಎಂದು ಹೇಳುತ್ತಾರೆ. ಅಥವಾ ಈ ಕ್ಷೇತ್ರದಲ್ಲಿ ಹೆಚ್ಚು ಮಾಡಿ ಎಂದು ಹೇಳುತ್ತಾರೆ. ಇಂಥ ಅನೇಕ practical logistic difficulties ಇದ್ದಾವೆ. ಅಲ್ಲಿ ಹೇಳಿದಾಗಲೂ ಕೂಡ ನಾವು ಮಾಡುವುದನ್ನು ಮಾಡಿದ್ದೇವೆ, ನಮಗೆ ಅಧಿಕಾರ ಇದೆ, ನಾವು ಸ್ಥಾಯಿ ಸಮಿತಿಯವರು ಬಜೆಟ್‌ನ್ನು ತಯಾರು ಮಾಡುವುದು ಎಂದು ಅನೇಕ ಸಂದರ್ಭಗಳಲ್ಲಿ ಆಗಿದೆ. ತಾವು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ನಾನೇನು ಅಲ್ಲಿ ಇದ್ದಂಥವನಲ್ಲ. ತಮ್ಮ ಮಾತನ್ನು ನಾನು ನಂಬುತ್ತೇನೆ. ಆ ಕಾರಣಕ್ಕಾಗಿ ಆಯುಕ್ತರು ಆ ರೀತಿ ಹೇಳಿರಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಒಂದು ವೇಳೆ ತಿಳಿ ಹೇಳಿಲ್ಲದಿದ್ದರೆ ಅದು ತಪ್ಪು ಎಂತಲೂ ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಈ ದುಡ್ಡನ್ನು ಯಾವ ರೀತಿ ಕ್ಷೇತ್ರಾವಾರು ವಿಂಗಡಣೆ ಮಾಡಬೇಕು ಎಂಬ ಬಗ್ಗೆ....

ಅಧ್ಯಕ್ಷರು : ಕುಳಿತಿಕೊಳ್ಳಿ ನಾಯ್ಡುರವರೇ, ನೀವು ಹಿರಿಯ ಸದಸ್ಯರು.

(ಗೊಂದಲ)

ಭಾಲ್ಕಿಯಲ್ಲಿನ ಆಸ್ಪತ್ರೆ ಕಾಮಗಾರಿ

88 (529): ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ 100 ಹಾಸಿಗೆಗಳ ಆಸ್ಪತ್ರೆಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಆ) ಈ ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಿದೆಯೆ;

ಇ) ಇದ್ದಲ್ಲಿ, ನಿಗದಿತ ಸಮಯದಲ್ಲಿ ಕಾಮಗಾರಿ ಮುಗಿಯುವ ಸಾಧ್ಯತೆ ಇದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 3 ತಿಂಗಳೊಳಗಾಗಿ ಪೂರ್ಣಗೊಳಿಸಲಾಗುವುದು.

ಆ) ದಿನಾಂಕ: 10-6-2002ರಂದು ಪ್ರಾರಂಭಿಸಿದ್ದು 9-12-2003 ರಲ್ಲಿ ಮುಗಿಯಬೇಕಾಗಿತ್ತು.

ಇ) ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಲಾಗುವುದು.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಈ ಒಂದು ಬೀದರ್ ಜಿಲ್ಲೆಯಲ್ಲಿ ಭಾಲ್ಕಿ ಪಟ್ಟಣ 40 ಕಿಲೋ ಮೀಟರ್‌ನ ಸೆಂಟರ್‌ಪಾಯಿಂಟ್. ಎಲ್ಲಾ ತಾಲ್ಲೂಕಿನಿಂದ 40 ಕಿಲೋ ಮೀಟರ್‌ಗೆ ಸೆಂಟರ್‌ಪಾಯಿಂಟ್ ಭಾಲ್ಕಿ ಪಟ್ಟಣ ಸಿಗುತ್ತದೆ. ಆ ಪಟ್ಟಣದಲ್ಲಿ ಈ ಆಸ್ಪತ್ರೆ ಏನು ಇದೆ, ಅದು 100 ಬೆಡ್ ಆಸ್ಪತ್ರೆ ಇದೆ. 100 ಹಾಸಿಗೆ ಉಳ್ಳ ಆಸ್ಪತ್ರೆ ನಡೆಯುತ್ತಿದೆ. ಈ ಆಸ್ಪತ್ರೆಯಲ್ಲಿ ಬಹಳಷ್ಟು ಕಳಪೆ ಮಟ್ಟದ ಕೆಲಸ ನಡೆಯುತ್ತಿದೆ ಎಂದು ಕಂಪ್ಲೇಂಟ್ ಆಗಿದೆ, ಸಾರ್ವಜನಿಕರ ದೂರೂ ಆಗಿದೆ. ಆದರೆ ಇವತ್ತಿನವರೆಗೆ ಈ ಆಸ್ಪತ್ರೆಗೆ ಯಾರೂ ಸಹ ಇನ್ಸ್‌ಪೆಕ್ಷನ್ ಮಾಡಿ ಸಂಬಂಧಪಟ್ಟ ಶಾಸಕರಿಗೆ ಆಗಲಿ ಯಾರು ದೂರು ಕೊಟ್ಟಿದ್ದಾರೆ, ಆ ದೂರಿನ ಬಗ್ಗೆಯೂ ತಿಳಿಸಿಲ್ಲ. ಮತ್ತೆ ವಿಶೇಷವಾಗಿ ಏನು ಅಂದರೆ ಈ ಆಸ್ಪತ್ರೆಯಲ್ಲಿ ಇವತ್ತಿನವರೆಗೆ ಬ್ಲಡ್ ಬ್ಯಾಂಕ್ ಇಲ್ಲ. ಆಪರೇಷನ್ ಥಿಯೇಟರ್ ಇಲ್ಲ. ಬಹಳಷ್ಟು ಜನ ಹೆರಿಗೆ ಕೇಸಸ್ ಫೇಲ್ ಆಗಿದ್ದಾವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಮಾಹಿತಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ತಮ್ಮ ಪ್ರಶ್ನೆಯನ್ನು ಪರಾಂಭರಿಸಬೇಕು. ಅದರಲ್ಲಿ ಕಳಪೆ ಕಾಮಗಾರಿ ಆಗಿದೆಯೆಂಬ ವಿಚಾರವನ್ನು ತಾವು ಕೇಳಿಲ್ಲ. ಭಾಲ್ಕಿ ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ 100 ಹಾಸಿಗೆಗಳ ಆಸ್ಪತ್ರೆಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂದು ಹಾಗೂ ಈ ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಿದೆಯೇ; ಇದ್ದಲ್ಲಿ ನಿಗದಿತ ಸಮಯದಲ್ಲಿ ಕಾಮಗಾರಿ ಮುಗಿಯುವ ಸಾಧ್ಯತೆ ಇದೆಯೇ ಎಂಬ ಪ್ರಶ್ನೆ ಕೇಳಿದ್ದಾರೆ. ಕಳಪೆ ಕಾಮಗಾರಿ ಆಗಿದ್ದರೆ ಅದರ ಬಗ್ಗೆ ತಾವು ದಯವಿಟ್ಟು ಒಂದು ಪತ್ರವನ್ನು ಬರೆಯಿರಿ. ಈ ಕೂಡಲೇ ಸರ್ಕಾರ ಅದರ ಬಗ್ಗೆ ವಿಚಾರಣೆ ಮಾಡಿ ತನಿಖೆ ನಡೆಸಿ ಆ ಕಾಮಗಾರಿ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಮೂರು ತಿಂಗಳೊಳಗಾಗಿ ಈ ಕಾಮಗಾರಿ ಕೆಲಸ ಮುಕ್ತಾಯವಾಗುತ್ತದೆ. ತಮಗೇ ಗೊತ್ತಿದ್ದಂತೆ ಅಲ್ಲಿ ಒಂದು ಕಾಲೇಜು ಇತ್ತು. ಶಾಂತಿವರ್ಧಕ ಎಜುಕೇಶನ್ ಸಂಸ್ಥೆಯವರು ಆ ಕಾಲೇಜಿನ ಪ್ರದೇಶದಲ್ಲಿ ಒಂದು ಕಟ್ಟಡವನ್ನು ಕಟ್ಟಿದ್ದರು. ಆ ಕೆಲಸ ಪ್ರಾರಂಭ ಮಾಡತಕ್ಕದ್ದಕ್ಕೆ ವಿಳಂಬ ಆಗಲಿಕ್ಕೆ ಕಾರಣ ಏಕೆ ಅಂದರೆ ಅವರು ನ್ಯಾಯಾಲಯಕ್ಕೆ ಹೋಗಿ ಒಂದು ತಡೆ ಆಜ್ಞೆ ತಂದಿದ್ದರು. ಆ ನ್ಯಾಯಾಲಯದಲ್ಲಿ ವಿಲೇವಾರಿ ಆಗದ ಕಾರಣಕ್ಕೇನೆ ಟೆಂಡರ್‌ನಲ್ಲಿ ನಮೂದಿತವಾದಂತಹ ಸಮಯದೊಳಗಾಗಿ ಈ ಕೆಲಸವನ್ನು ಮಾಡಲು ಆಗಲಿಲ್ಲ. ಮೂರು ತಿಂಗಳೊಳಗಾಗಿ ಮುಕ್ತಾಯವನ್ನು ಮಾಡುತ್ತೇವೆ.

ಅಧ್ಯಕ್ಷರು : ಮುಂದೆ ಹೋಗೋಣ. ಬಹಳ ಕಾಲ ಆಗಿದೆ.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಮಂತ್ರಿಗಳ ಹತ್ತಿರ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯವರು ಬಿಟ್ಟಿಲ್ಲ ಎಂಬ ಯಾವ ಮಾಹಿತಿ ಇದೆ, ಇದರಲ್ಲಿ 30 ಪರ್ಸೆಂಟ್ ಎನ್‌ಕ್ರೋಚ್‌ಮೆಂಟ್ ಆಗಿದೆ.

ಇವತ್ತು ಬಿಲ್ಡಿಂಗ್ ಕಟ್ಟಿದ್ದಾರೆ. ಮತ್ತೆ ಅಲ್ಲಿ ಮನೆ ಕಟ್ಟಿಕೊಂಡು ಕಾಂಪೌಂಡನ್ನು ಕಟ್ಟಿಕೊಂಡು ಕುಳಿತಿದ್ದಾರೆ. ಅದರ ಬಗ್ಗೆಯೂ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಈ ತರಹ ನೀವೇನಾದರೂ ಸರ್ಕಾರಿ ಜಮೀನು ಬಿಟ್ಟರೆ ಅಲ್ಲಿ ಆಸ್ಪತ್ರೆ ಮುಂದೆ ಉಳಿಯುವುದಿಲ್ಲ. ಅಲ್ಲೆಲ್ಲಾ ಇಲ್ಲೀಗಲ್ ಎನ್‌ಕ್ರೋಚ್‌ಮೆಂಟ್ ಆಗಿ ಮನೆ ಕಟ್ಟುವ ಕೆಲಸವೇ ಆಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಈ ಪ್ರಶ್ನೆಯಲ್ಲಿ ಅದು ಇರಲಿಲ್ಲ. ಆ ಕಾರಣಕ್ಕಾಗಿ ತಾವು ದಯವಿಟ್ಟು ಒಂದು ಪತ್ರವನ್ನು ಕಳುಹಿಸಿಕೊಡಿ. ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಹೇಳಿ ನಾನು ಅಧಿಕಾರಿಗಳಿಗೆ ಒತ್ತಾಯ ಮಾಡುತ್ತೇನೆ.

ಹುಕ್ಕೇರಿ ಮತಕ್ಷೇತ್ರದಲ್ಲಿರುವ ಶಾಲೆಗಳಲ್ಲಿ ಶಿಕ್ಷಕರ ಕೊರತೆ

89 (506): ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಕ್ಕೇರಿ ಮತಕ್ಷೇತ್ರದಲ್ಲಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿವೆ;

ಆ) ಎಷ್ಟು ವರ್ಷಗಳಿಂದ ಈ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ;

ಇ) ಶಿಕ್ಷಕರ ಕೊರತೆಯನ್ನು ನೀಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹುಕ್ಕೇರಿ ಮತಕ್ಷೇತ್ರದಲ್ಲಿ

ಪ್ರಾಥಮಿಕ ಶಾಲೆಗಳು – 120

ಪ್ರೌಢಶಾಲೆಗಳು – 09

ಆ) ಈ ಶಾಲೆಗಳಲ್ಲಿ ಕಳೆದ ಆರು ತಿಂಗಳುಗಳಿಂದ ಮಾತ್ರ ಶಿಕ್ಷಕರ ಕೊರತೆ ಇರುತ್ತದೆ.

ಇ) 2003–2004ನೇ ಸಾಲಿನಲ್ಲಿ 106 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ. 36 ಹುದ್ದೆಗಳು ಖಾಲಿ ಇರುತ್ತವೆ. ಪ್ರೌಢಶಾಲೆಗಳಲ್ಲಿ 6 ಹುದ್ದೆಗಳು ಖಾಲಿ ಇರುತ್ತವೆ. ಶಿಕ್ಷಕರ ಕೊರತೆಯನ್ನು ನಿಯೋಜನೆ ಮೂಲಕ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಹುಕ್ಕೇರಿ ಮತಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳು 120, ಪ್ರೌಢಶಾಲೆಗಳು 09 ಎಂದು ಹೇಳಿದ್ದೀರಿ. ಈಗ ನಮ್ಮ ತಾಲ್ಲೂಕಿನಲ್ಲಿ ನಿಜವಾಗಿ 118 ಪ್ರಾಥಮಿಕ ಶಾಲೆ ಇದೆ. ಪ್ರೌಢಶಾಲೆಗಳು 18 ಅನುದಾನಿತ ಪ್ರೌಢಶಾಲೆಗಳು 7 ಇವೆ. ಅನುದಾನ ರಹಿತ ಪ್ರೌಢಶಾಲೆಗಳು 5 ಇವೆ. ಪ್ರಾಥಮಿಕ ಶಾಲೆಯ ಶಿಕ್ಷಕರ ಮಂಜೂರಿ 641 ಇದೆ. ಕೆಲಸ ನಿರ್ವಹಿಸುತ್ತಿರುವಂತಹ ಸಂಖ್ಯೆ 631. ಹಿಂದಿನ ಪ್ರಕಾರ ಇನ್ನೂ 10 ಜನ ಶಿಕ್ಷಕರು ಬೇಕಾಗಿರುತ್ತಾರೆ. ನಿಜವಾಗಿ ವಿದ್ಯಾರ್ಥಿಗಳ ಸಂಖ್ಯೆ 26,487 ಇದೆ. ಸರಾಸರಿ 40 ವಿದ್ಯಾರ್ಥಿಗಳಿಗೆ ಒಬ್ಬರು ಗುರುಗಳಂತೆ ಈಗ 41 ಶಿಕ್ಷಕರು ವಿದ್ಯೆ ಕಲಿಸಲು ಬೇಕಾಗುತ್ತದೆ. ಪ್ರಾಥಮಿಕ ಶಾಲೆ ಶಿಕ್ಷಕರ ಕೊರತೆ ನಿಜವಾಗಿಯೂ ನಮ್ಮಲ್ಲಿ 82 ಇದೆ. ಅದರ ಜೊತೆಗೆ ಹೆಡ್ ಮಾಸ್ಟರ್ ಬೇಕಾಗಿರುವಂತಹ ಸಂಖ್ಯೆ 10. ಹೀಗೆ ಇನ್ನೂ 92 ಶಿಕ್ಷಕರ ಕೊರತೆ ನನ್ನ ಕ್ಷೇತ್ರದಲ್ಲಿದೆ. ಇನ್ನೂ ಕೆಲವು ಗ್ರಾಮಗಳಾದಂತಹ ಭರಮಾಪುರ ಗ್ರಾಮದಲ್ಲಿ 5ನೇ ತರಗತಿಯವರೆಗೂ ಶಾಲೆ ಇದ್ದರೂ ಸಹಿತ ಇವತ್ತಿಗೂ ಅಲ್ಲಿ